Regd No BG 155

Sri "SATYAVADI"
— DAILY —
MYSORE4
46 th Year

Protect the cow

—೫೮—

ಸತ್ಯವಾದಿ
SATYAVADI

ಸ್ಥಾಪಕರು— ಆರಮನೆ ಸಿಂಸ್ಕೇದಾರ್ ಎಂ. ವಿ. ಸುಬ್ಬರಾಯಯ್ಯರು [ಬಿಡಿ ಪ್ರತಿ 3 ಪೈ

28—7—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಹೊಸ ತೆರಿಗೆ ವಿಧಿಸುವುದು ಅನಿವಾರ್ಯ

ಈನೆಯ ಯೋಜನೆ ಯಶಸ್ವಿ ಆಗಲು ಹೊಸ ತೆರಿಗೆಗಳು ಅನಿವಾರ್ಯವೆಂದು ಪ್ರಧಾನಿಸಿರು. ಅಲಹಾಬಾದಿನಲ್ಲಿ ನುಡಿದರು.

ಮಾತುಕತೆ ವಿಫಲ

ಬೆಂಗಳೂರು 27 — ವಿದ್ಯಾರ್ಥಿ ನಾಯಕರು ಹಾಗೂ ಶಿಕ್ಷಣ ಮಂತ್ರಿಯವರಿಗೂ ಆದ ಮಾತುಕತೆಗಳು ವಿಫಲವಾದ ಕಾರಣ ನಿಗದಿ ಆಗಿರುವಂತೆ 7 ದಿವಸಗಳಲ್ಲಿ ಮುಷ್ಕರ ನಿಲ್ಲುವ ಸಂಭವ ವಿಲ್ಲವೆಂದು ವರದಿ ಆಗಿದೆ. ಪ್ರಧ್ಯಾಹ್ನ ಇಬ್ಬರು ಹುಡುಗಿಯರು ಸೇರಿ ಮಂತ್ರಿಗಳನ್ನು ಭೇಟಿ ಮಾಡಿದಾಗ, ಹಳೆಯ ಮೈಸೂರಿನ ಭಾಗದಲ್ಲಿ ಶುಲ್ಕ ಇಳಿಸುವ ಸಾಧ್ಯವಾದ ಪರಿಶೀಲನೆಗೆ ಮಂತ್ರಿಮಂಡಲದ ಮುಂದೆ ವಿಚಾರವನ್ನು ಇಡುವ ದಾಗಿಯೂ, ಆದರೆ ಈ ಕ್ಷಣ ಅಲ್ಲದೆ ಇದ್ದರೂ ಮುಂದೆ ಯಾವಾಗಲಾದರೂ ಹೆಚ್ಚಿಸಬಹುದಾದ ಶುಲ್ಕ ಏರಿಕೆ ತತ್ವಕ್ಕೆ ಬದ್ಧರಾಗಬೇಕೆಂದು ಮಂತ್ರಿಯವರು ತಿಳಿಸಿದರು ಮುಷ್ಕರಗಾರರ ಕೇಂದ್ರ ಸಮಿತಿ ಜರೂರು ಸಭೆ ಸೇರಿ ಮಂತ್ರಿಯವರ ಸೂಚನೆಯನ್ನು ತಿರಸ್ಕರಿಸಿದರು

ರಾಜಾಜಿರವರ ಎಚ್ಚರಿಕೆ

ವಿದ್ಯಾಸಾಗರ ಲಾ ಕಾಲೇಜು ಸಂಘದ ಉದ್ಘಾಟನೋತ್ಸವವನ್ನು ಸ್ವತಂತ್ರ ಪಕ್ಷದ ನಾಯಕರಾದ ಶ್ರೀ ಸಿ. ರಾಜಗೋಪಾಲಾಚಾರಿಯವರು ನಿನ್ನೆ ನೆರವೇರಿಸುತ್ತಾ

ವಿದ್ಯಾರ್ಥಿ ಮುಷ್ಕರ

ಶುಲ್ಕ ಏರಿಕೆಯ ವಿರುದ್ಧ ಕಾಲೇಜು ವಿದ್ಯಾರ್ಥಿಗಳ ಮುಷ್ಕರ ಮೈಸೂರು ನಗರದಲ್ಲಿ 4 ನೆಯ ದಿನಕ್ಕೆ ಇಂದು ಪ್ರವೇಶಿಸಿತು. ವಿದ್ಯಾರ್ಥಿಗಳು ಮೆರವಣಿಗೆಯನ್ನು ನಡೆಸಿದರು.

ಜಂಗ್ಲಿ

ರಜತವಾರ ಮಹೋತ್ಸವ

ಮೈಸೂರಿನ ಪ್ರಖ್ಯಾತ ವುಡ್ ಲ್ಯಾಂಡ್ಸ್‌ನಲ್ಲಿ ನಿನ್ನೆ ಸಂಜೆ ಜಂಗ್ಲಿ ಚಿತ್ರದ ರಜತವಾರ ಮಹೋತ್ಸವ ವೈಭವದಿಂದ ನೆರವೇರಿತು. ಚಿತ್ರ ನಿರ್ಮಾಪಕರಾದ ಶ್ರೀ ಸುಬೋಧ್ ಮುಖರ್ಜಿಯವರು, ತಾರೆ ಶ್ರೀಮತಿ ಸೈರಾಬಾನು ರವರು ಪ್ರೇಕ್ಷಕರಿಗೆ ಕಾಣಿಸಿಕೊಂಡರು ವುಡ್‌ಲ್ಯಾಂಡ್ಸ್ ದೀಪದಿಂದ ಅಲಂಕೃತವಾಗಿದ್ದಿತು.

ರಜತವಾರ ಉತ್ಸವ ಸಂದರ್ಭದಲ್ಲಿ ಗ್ರೀನ್ಸ್ ಹೋಟೆಲ್‌ನಲ್ಲಿ ವುಡ್‌ಲ್ಯಾಂಡ್ಸ್ ಪಿಕ್ಚರ್ ಹೌಸ್‌ನವರು ಮತ್ತು ಹೇಮಾ ಫಿಲಂರವರು ಸುಬೋಧ ಮುಖರ್ಜಿ, ಸೈರಾಬಾನುರವರ ಗೌರವಾರ್ಥ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಸೈರಾ ಬಾನು ತಾಯಿ ನಾಸಿಂ ಬಾನು, ಚಿತ್ರದ ಕ್ಯಾಮೆರಾಮನ್ ಚಿತ್ರದ ಸಹ ನಿರ್ದೇಶಕರು ಆಗಮಿಸಿದ್ದರು. ಚಿತ್ರಮಂದಿರದ ಮಾಲೀಕರಾದ ಶ್ರೀಗಳಾದ ಎಂ ಗೋವಿಂದ ಸ್ವಾಮಿಯವರು, ಎಂ. ರಾಮಮೂರ್ತಿಯವರು, ಎಂ. ಲಕ್ಷ್ಮಣಮೂರ್ತಿಯವರು ಅಹ್ವಾನಿತರನ್ನು ಸ್ವಾಗತಿಸಿದ

ಉಪಾಹಾರಾನಂತರ ಯವರು ಭಾಷಣ ತ್ಕಾರಕ್ಕೆ ವಂದಿಸಿ ಭಾಗವಹಿಸಲು ಸಂತೋಷವಾಗುವು ಪ್ರದ

ಪ್ರದರ್ಶನ

ಅಲಹಾಬಾದಿನ ಸಂದ್ಧಿ— ಗ್ರಾಮ ಭಾರತಿ ಅಸ್ಪೃಶ್ಯರ ಹಾಕಲು ಗುರುವಾರ ಇಲ್ಲಿಗೆ 20ಮೈಲಿ ದೂರದಲ್ಲಿರುವ ಹನುಮಾನಗಂಜಿಗೆ ಪ್ರಧಾನಿಗಳು ಬಂದಿದ್ದಾಗ ಪ್ರಜಾಸೋಷಲಿಸ್ಟ್ ಮತ್ತು ಸೋಷಲಿಸ್ಟ್ ಪಾರ್ಟಿಯವರು ಪ್ರದರ್ಶನ ನಡೆಸಿ ತಮ್ಮ ಕೇಳಿಕೆಯ ಛಾರ್ಟರ್‌ರನ್ನು ಕೊಟ್ಟರು.

ಸುಂಕ ವಿಧಿಸಿದೆ

ಕಾಡ್ಮಂಡು ವೃತ್ತಾಂತ— ಭಾರತದಿಂದ ನೇಪಾಳಕ್ಕೆ ಆಮದು ಮಾಡಿಕೊಳ್ಳಲ್ಪಡುವ ಮೋಟಾರು ಕಾರು, ಸ್ಪೇರ್ ಪಾರ್ಟ್ಸ್ ವ್ಯಾಗನ್ನು, ಲ್ಯಾಂಡು ರೋವರುಗಳ ಮೇಲೆ ನೇಪಾಳ ಸರ್ಕಾರ ಶೇಕಡ 30 ಸುಂಕ ವಿಧಿಸಿದೆ

ಮುಷ್ಕರ

ಚಿಕ್ಕಮಗಳೂರು ಕಾಲೇಜಿನ ವಿದ್ಯಾರ್ಥಿಗಳು ನಿನ್ನೆಯಿಂದ ಮುಷ್ಕರ ಆರಂಭಿಸಿದರು.

ಚಿತ್ರವನ್ನು ಮುಟ್ಟಿಸಿದ ಬಗ್ಗೆ ಚಿತ್ರ ವಂದಿದವರಿಗೆ ಧನ್ಯವಾದಗಳು ಎಂದು ಅವರು ನುಡಿದರು.

ವುಡ್‌ಲ್ಯಾಂಡ್ಸ್‌ನವರು ಸುಬೋಧ್ ಮುಖರ್ಜಿ, ಸೈರಾ ಬಾನು ಮತ್ತು ನಾಸಿಂ ಬಾನುರಿಗೆ ದೊಡ್ಡ ರಜತ ಬಟ್ಟಲುಗಳನ್ನು ಇತ್ತರು 25 ವಾರ ಚಿತ್ರ ಪ್ರದರ್ಶನ ಮಾಡಿ ದಾಖಲೆ ಸ್ಥಾಪಿಸಿದ ಚಿತ್ರ ವಂದಿಂದವರಿಗೆ ಷೀಲ್ಡ್ ಕೊಡಲಾಯಿತು. ವುಡ್‌ಲ್ಯಾಂಡ್ಸ್ ಆಪರೇಟರ್ ಶ್ರೀ ಮಹದೇವಪ್ಪನವರಿಗೆ ಮುಖರ್ಜಿಯವರ ಹಸ್ತದಿಂದ ರಜತ ಕಪ್ ಬಹುಮಾನ ಕೊಡಿಸಲಾಯಿತು.

ಚಿತ್ರಮಂದಿರದ ಒಳಗೆ ಮತ್ತು ಹೊರಗೆ ಜನರು ಕಿಕ್ಕಿರಿದು ತುಂಬಿದ್ದರು

ವಿವಿಧ ವಾರ್ತೆಗಳು

ಭಾರತದಲ್ಲಿ ಪ್ರಜಾಪ್ರಭುತ್ವ ರಕ್ಷಣೆ ಮಾಡಲು ವಿರೋಧ ಪ್ರಜಾಪ್ರಭುತ್ವ ಪಕ್ಷಗಳು ರಾಷ್ಟ್ರೀಯ ಪ್ರಜಾಪ್ರಭುತ್ವ ರಂಗವಾಗಬೇಕೆಂದು ಸ್ವತಂತ್ರಪಕ್ಷ ಪ್ರಧಾನ ಕಾರ್ಯದರ್ಶಿ ಶ್ರೀ ಎಂ ಆರ್ ಮಸಾನಿ ನಿನ್ನೆ ಬೊಂಬಾಯಿನಲ್ಲಿ ತಿಳಿಸಿದರು.

ಂ ಂ

ವಾಕಿಸ್ವಾತಂತ್ರ್ಯ ಮತ್ತು ಚೀನ ಅಕ್ರಮಣ ನಡೆಯುತ್ತಿರುವ ಒಪ್ಪಂದ ಮಾಡಿಕೊಳ್ಳುವುದು ಸಾಧ್ಯವಿಲ್ಲ ಎಂದು ಕಂಠಾಚಿ ವಾರ್ತೆ.

ಂ ಂ

ಪಶ್ಚಿಮ ಬಂಗಾಳ ಕಾಂಗ್ರೆಸಿನಲ್ಲಿ ಬಿಕ್ಕಟ್ಟೊದಗಿದೆ ಎಂದು, ಅದಕ್ಕಾಗಿ ಪ್ರಧಾನಿ ನೆಹರು ಕಲ್ಕತ್ತಾ ಭೇಟಿಯೊಂದೂ ವದಂತಿಯೊಂದು ತಿಳಿಸುತ್ತದೆ

ಂ ಂ

ವಿಶಾಂತಿನ ಅನಾಜಮಂಡಿ ಪ್ರದೇಶ ಅಂಗಡಿಯಲ್ಲಿ ಬೆಂಜು ಗಡ್ಡೆಯಲ್ಲಿ ಹಲ್ಲಿ ಸಿಕ್ಕಿತು ಎರಡು ಕಾರ್ಖಾನೆಗಳು ಬೂದಾಗಬೇಕೆಂಬ ಆಜ್ಞೆ ಆಗಿದೆ

ಂ ಂ

ಚೀನೀಯರಿಗೆ ಭಾರತ ಒಳ್ಳೆಯ ಹೋರಾಟ ಕೊಡಬಲ್ಲುದೆಂದು ಪ್ರಧಾನಿ ನೆಹರು ಅಲಹಾಬಾದಿನಲ್ಲಿ ತಿಳಿಸಿದರು

ಂ ಂ

ಕೊಲಂಬೋ ವಾರ್ತೆ— ತಮಿಳು ಭಾಷೆ ಮತ್ತು ಹಿಂದೂ ಸಂಸ್ಕೃತಿ ಅಭಿವೃದ್ಧಿಗಾಗಿ ಜಾಫ್ನಾದಲ್ಲಿ ಹಿಂದೂ ಸಾಂಸ್ಕೃತಿಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸಿಲೋನ್ ಸಂಕಾಂ ನಿರ್ಧರಿಸಿದೆ.

ನಾಳೆಯ ಪಂಚಾಂಗ

ಅನ್ಯಾನ ಮಹಾವಿದ್ಯಾ ದರ್ಶಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ
29 ಶ್ರಯೋದಶಿ ಆದಿತ್ಯ

ಪ್ಲಾಸ್ಟಿಕ್ ಲತಾಮಂಟಪ

ಶಿವಮ್ಕುಸೆ (ಹಾಡ್) — ಪ್ಲಾಸ್ಟಿಕ್ ದಿನೇದಿನೇ ಜನಜೀವನದಲ್ಲಿ ಬಹು ಮುಖ್ಯ ಪಾತ್ರ ವಹಿಸಲು ತೊಡಗಿದೆ : ತೋಟಗಾರಿಕೆಯಲ್ಲಿಯೂ ಇದು ಪ್ರವೇಶಿಸಿದೆ : ಪ್ಲಾಸ್ಟಿಕ್ಕಿನಿಂದಲೇ ಲತಾಗೃಹವೊಂದರ ನಿರ್ಮಾಣವಾದ ಅತಿಶಯದ ವರದಿ ಬಂದಿದೆ ; ಇದು ಮಾತ್ರವಲ್ಲದೆ, ನಲವತ್ತು ಜನರು ಪ್ರಯಾಣ ಮಾಡ ಬಹುದಾದ ಹಡಗನ್ನೂ, ಭಾರಿ ಪ್ರಮಾಣದ ದ್ರವಶೇಖರಣೆಯ ಟ್ಯಾಂಕುಗಳನ್ನೂ ಪ್ಲಾಸ್ಟಿಕ್ಕಿನಿಂದಲೇ ತಯಾರಿಸಲಾಗಿದೆ:

ವಿದ್ಯುತ್ ಗಣಿತ ಕಲಾನಿಧಿ

ಎಂತಹ ಕ್ಲಿಷ್ಟವಾದ ಲೆಕ್ಕಗಳನ್ನೂ ಕಣ್ಣುಮುಚ್ಚಿ ತೆರೆಯುವುದರೊಳಗೆ ಬಿಡಿಸುವ ವಿದ್ಯುದ್ಯಂತ್ರವೊಂದನ್ನು ಬರ್ಲಿನ್ನು ನಗರದ ಮಧ್ಯದಲ್ಲಿ ಅಮೇರಿಕಾ ಸಂಸ್ಥೆಯೊಂದು ಸ್ಥಾಪಿಸಿದೆ : ಇದು ಅಮೇರಿಕನ್ನರಿಗೆ ಬರ್ಲಿನ್ನಿನ ಆರ್ಥಿಕ ಸುಭದ್ರತೆಯಲ್ಲಿರುವ ಭರವಸೆಯನ್ನು ಎತ್ತಿ ತೋರಿಸುತ್ತದೆ : ಜೀವವಿಮೆ, ಪ್ರಾವಿಡೆಂಟ್ ಫಂಡು ಮುಂತಾದವುಗಳನ್ನು ಹಿಡಿದನಂತರ ಒಬ್ಬೊಬ್ಬ ಕಾರ್ಮಿಕನಿಗೂ ಎಷ್ಟು ಸಂಬಳ ಕೊಡಬೇಕೆಂಬುದನ್ನೂ, ಮಾಲೀಕನು ತನ್ನ ಕೈಕೆಳಗಿನ ಕೆಲಸಗಾರರಿಗೆ ಎಷ್ಟು ಹಣ ಕೊಡಬೇಕಾಗಿ ಬರುವುದೆಂಬುದನ್ನೂ ತಿಳಿಸಲು ಈ ಯಂತ್ರಕ್ಕೆ ಬೇಕಾದ್ದು ಒಂದೇ ಕ್ಷಣ!

ನವ ದೆಹಲಿ 26— ಕೇಂದ್ರ ಮಂತ್ರಿಮಂಡಲದಲ್ಲಿ, ನಿರ್ದಿಷ್ಟವಾಗಿ ತನಗೂ ಮತ್ತು ಖಾತೆಯಿಲ್ಲದ ಮಂತ್ರಿಯವರಿಗೂ ಯಾವ ಭಿನ್ನಾಭಿಪ್ರಾಯವು ಇಲ್ಲವೆಂದು ಹಣಕಾಸಿನ ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ತಿಳಿಸಿದರು.

೦ ೦ ೦ ೦

ನವ ದೆಹಲಿ 25 — ವಿದೇಶ ವಿನಿಮಯದಲ್ಲಿ ಖೋತಾ ಬಿದ್ದಿರುವ 220 ಮಿಲಿಯ ಡಾಲರುಗಳು ಭರ್ತಿ ಆಗುವವು ಭಾರತಕ್ಕೆ ನೆರವನ್ನು ನೀಡಿ ಸಂಘದ ಸಭೆ ಆದನಂತರ ಯೋಜನೆಯ ಪುನರ್ಪರಿಶೀಲನೆ ಮಾಡಲಾಗುವದು ಎಂದು ಹಣಕಾಸು ಮಂತ್ರಿ ಶ್ರೀ ಮೊರಾರ್ಜಿ ದೇಸಾಯರು ತಿಳಿಸಿದರು.

— ೦ ೦ ೦ ೦

ಶ್ರೀ ಕೆ ರಾಮಣ್ಣನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಮೈಸೂರು ಆರ್ಟಿಸ್ಟ್ಸ್ ಸಭೆ ಶ್ರೀ ಬಿ ಸುಬ್ಬಯ್ಯ ನಾಯ್ಡುರವರ ನಿಧನಕ್ಕಾಗಿ ಸಂತಾಪಿಸಿದೆ.

Help The 'Gorakshana'

Advertise in Gorakshana and help the pious cause

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಅಪೇತ್ಕಾಲದಲ್ಲಿ ನೆರವು
"ನಾನು ಹಾಳಾದೆ, ರಾಮಪ್ಪ ನನ್ನ ಬೆಳೆ ಹಾಳಾಗಿ ಹೋಯಿತು. ನನ್ನ ಹಣ ಎಲ್ಲಾ ಹೋಯಿತು. ಮನೆಯಲ್ಲಿ ಧಾನ್ಯವೂ ಬರಿದಾಗಿದೆ."
"ಆದರೆ, ನೀನು ನಿರಾಶೆಯಾಗಬೇಕಾಗಿಲ್ಲ ಸೋಮಯ್ಯ ನಿನ್ನ ಜೀವವಿಮಾ ಪಾಲಿಸಿಯ ಮೇಲೆ ನೀನು ಹಣ ಸಾಲ ಪಡೆಯಬಹುದು. ನೀನು ಎಲ್.ಐ.ಸಿ. ಏಜೆಂಟನನ್ನು ಈಕ್ಷಣ ಭೇಟಿಯಾಗಬಾರದು?"
ಸೋಮಯ್ಯ ಎಲ್.ಐ.ಸಿ. ಏಜೆಂಟನನ್ನು ಕಾಣುತ್ತಾನೆ.
"ನಿಜ. ನಿನ್ನ ಪಾಲಿಸಿಯ ಮೇಲೆ ನೀನು ಸಾಲವನ್ನು ಪಡೆಯಬಹುದು."
ಕೆಲವೇ ದಿನಗಳಲ್ಲಿ ಸೋಮಯ್ಯನಿಗೆ ಎಲ್.ಐ.ಸಿ.ಯಿಂದ ಹಣ ಬಂದು, ಈ ಹಣ ಅವನಿಗೆ ಮುಂದೆ ಪೈರು ಕೊಯ್ಯುವ ಕಾಲದವರೆಗೆ ತನ್ನ ಕಷ್ಟಗಳನ್ನು ಸುಧಾರಿಸಲು ಸಹಕಾರವಾಗುತ್ತದೆ.
ಮುಂದಿನ ಬೆಳೆಯಲ್ಲಿ ಸೋಮಯ್ಯನು ದಂಡಿ ಬೆಳೆಯನ್ನು ಕೊಯ್ಯುತ್ತಾನೆ. ಇದರಿಂದಾಗಿ ಅವನ ಕಷ್ಟಗಳು ಪರಿಹಾರವಾಗಿ, ತನ್ನ ಪಾಲಿಸಿಯ ಮೇಲಿನ ಸಾಲವನ್ನು ಸಲೀಸಾಗಿ ಅವನಿಗೆ ಸಾಧ್ಯವಾಗುತ್ತದೆ.
"ನಿಜವಾಗಿಯೂ ಜೀವವಿಮೆ ಹಾದ ವಸ್ತುವಾಗಿಯೂ ಇದೆ"
ಜೀವವಿ
ಶ್ರೇಷ್ಠ ಉಪಾ

Edited, Printe
Dha

ವುಡ್‌ಲ್ಯಾಂಡ್ಸ್

25th Silver Jubilee week ನೇ ರಜತಮಹೋತ್ಸವ ವಾರ

Junglee ಜಂಗ್ಲಿ

ಅಪ್ರತಿಮ ಹಿಂದಿ ಚಿತ್ರರತ್ನ .... ದಿನವಹಿ 3 ಪ್ರದರ್ಶನಗಳು

ಆಪೆರಾ— 20—7—62 ರಿಂದ

ಜಾದೂ ಮಹಲ್ Jadoo Mahal

ಹೆಲೆ, ಅಜಿತ್, ಪಿರಲಾಲ್, ಕೃಷ್ಣಕುಮಾರಿ, ಮೈಕ್ ಪಾತ್ರವಹಿಸಿರುವ

ಮೂಜಾಜಾಲಗಳಿಂದ ಕೂಡಿದ ರೋಮಾಂಚಕ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನಗಳು